**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 4069/2023**

**ದಿನಾಂಕಃ 18.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ದೇವರಾಜ ಬಿ ಎ | ಚಾಸಾ-2, ಪ್ರಾಸ.-4 |
| ತಂದೆಯ ಹೆಸರು ಃ | ಅಜ್ಜಿಗಪ್ಪ | |
| ವಯಸ್ಸು ಃ | 30 ವರ್ಷ | |
| ಉದ್ಯೋಗ ಃ | ಕೂಲಿ ಕೆಲಸ | |
| ವಾಸ ಃ | ಬಿಸಲೆರೆ | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ವ್ಯಕ್ತಿ ನನಗೆ ಗೊತ್ತು. ಚಾಸಾ-1 ರವರ ಪರಿಚಯ ಇರುತ್ತದೆ. ಚಾಸಾ-3 ರಿಂದ 6 ರವರ ಪರಿಚಯ ಇರುತ್ತದೆ. 2023 ನೇ ಸಾಲಿನಲ್ಲಿ ನಾನು ಅಭಿಶೇಕ್ ಸಾಮಿಲ್ ನಲ್ಲಿ ಕೆಲಸ ಮಾಡುತ್ತಿರುವಾಗ ವಿರಾಮದ ಸಮಯದಲ್ಲಿ ಬೆಳಗ್ಗೆ 11.30 ಗಂಟೆಗೆ ಹೊರಗಡೆ ಬಂದು ನೋಡಿದಾಗ ಬೀರೂರು ಕಡೆಯಿಂದ ಕಡೂರು ಕಡೆಗೆ ಒಂದು ಲಾರಿ ಹೋಗುತ್ತಿದ್ದು, ಕಡೂರಿನಿಂದ ಬೀರೂರು ಕಡೆಗೆ ಮೃತ ವ್ಯಕ್ತಿಯು ಬೈಕನ್ನು ಚಲಾಯಿಸಿಕೊಂಡು ಬರುತ್ತಿದ್ದನು. ಲಾರಿಯು ಅತೀವೇಗವಾಗಿ ಬರುತ್ತಿತ್ತು. ಶಬ್ದ ಕೇಳಿ ಬಂತು ಸ್ಥಳಕ್ಕೆ ಹೋಗಿ ನೋಡಿದಾಗ ಲಾರಿಯ ಚಕ್ರ ಮೃತ ಅಶೋಕ ರವರ ಮೇಲೆ ಹರಿದಿರುತ್ತದೆ. ಮೃತ ಅಶೋಕ ರವರ ತಲೆಗೆ, ಕಾಲಿಗೆ ತೀವ್ರ ಗಾಯವಾಗಿತ್ತು. ಅಪಘಾತ ನಡೆದಿದ್ದರೂ ಸಹ ಲಾರಿಯ ಚಾಲಕನು ಲಾರಿಯನ್ನು ನಿಲ್ಲಿಸದೇ ಹೋಗಿರುತ್ತಾನೆ. ಮೃತ ವ್ಯಕ್ತಿಯನ್ನು ಬೀರೂರಿನ ಸರ್ಕಾರಿ ಆಸ್ಪತ್ರೆಗೆ ಸಾರ್ವಜನಿಕರು ಸೇರಿಸಿರುತ್ತಾರೆ. ನಂತರ ಮೃತ ವ್ಯಕ್ತಿಯ ಹೆಂಡತಿಯಾದ ಚಾಸಾ-1 ರವರು ಆಸ್ಪತ್ರೆಗೆ ಬಂದಿರುತ್ತಾರೆ.

ಘಟನೆ ನಡೆದ ಮರುದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು ಸ್ಥಳ ಮಹಜರನ್ನು ಜರುಗಿಸಿ ಛಾಯಾಚಿತ್ರವನ್ನು ತೆಗೆಸಿರುತ್ತಾರೆ. ನನ್ನ ಜೊತೆ ಇತರೇ 3 ವ್ಯಕ್ತಿಗಳು ಇದ್ದರು, ಅವರ ಹೆಸರು ನನಗೆ ಈಗ ಗೊತ್ತಿಲ್ಲ. ಸಾಕ್ಷಿ ನಿಪಿ-10 ರಿಂದ 12 ರ ಛಾಯಾಚಿತ್ರಗಳನ್ನು ನೋಡಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ. ನಿಪಿ-9 ರ ಮಹಜರ್ ನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ಸಮಯ ನನಗೆ ನೆನಪಿಲ್ಲ. ಮಹಜರ್ ನಂತರ ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ಸಾಕ್ಷಿಗೆ ಅಮಾನತ್ತು ಮಹಜರ್ ಸಮಯದಲ್ಲಿ ತೆಗೆಯಲಾದ 3 ಛಾಯಾಚಿತ್ರಗಳನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-14 ರಿಂದ 16 ಎಂದು ಗುರುತಿಸಲಾಯಿತು. ಪೋಲಿಸ್ ಠಾಣೆಯಲ್ಲಿ ನನ್ನ ಜೊತೆ ಬೇರೆ ಯಾರು ಇದ್ದರು ಎಂದು ನನಗೆ ನೆನಪಿಲ್ಲ. ಮೃತ ವ್ಯಕ್ತಿಯ ಸಾವಿಗೆ ಆರೋಪಿಯೇ ಕಾರಣ. ಘಟನೆಯ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ( ಆರೋಪಿಯ ಗುರುತಿಸುವಿಕೆ ಬಗ್ಗೆ ಆರೋಪಿ ಪರ

ವಕೀಲರು ಯಾವುದೇ ತಕರಾರು ಇಲ್ಲಾ ಎಂದು ನುಡಿದಿರುತ್ತಾರೆ )

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>**

ದಿಃ 18.08.2023 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ನಾನು ಬೀರೂರಿನ ಅಭಿಶೇಕ್ ಸಾಮಿಲ್ ನಿಂದ ಹೊರಗೆ ಬಂದಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಬೀರೂರು - ಕಡೂರು ಮಧ್ಯೆ ಇರುವ ರಾಷ್ಟ್ರೀಯ ಹೆದ್ದಾರಿ 206 ರ ಅಗಲೀಕರಣ ಕೆಲಸ ನಡೆಯುತ್ತಿತ್ತು ಎಂದರೆ ಸರಿ. ಆ ಸಮಯದಲ್ಲಿ ಬೀರೂರು ಕಡೆಯಿಂದ ಕಡೂರು ಕಡೆಗೆ ಲಾರಿಯನ್ನು ಆರೋಪಿ ಅತೀವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಕಡೂರು ಕಡೆಯಿಂದ ಬೀರೂರು ಕಡೆಗೆ ಬರುತ್ತಿದ್ದ ಮೃತ ವ್ಯಕ್ತಿ ಚಲಾಯಿಸುತ್ತಿದ್ದ ಬೈಕಿಗೆ ಸೈಡಿನಿಂದ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ. ಪರಿಣಾಮವಾಗಿ ಬೈಕ್ ಚಾಲಕ ಬೈಕ್ ಸಮೇತ ಕೆಳಗೆ ಬಿದ್ದು ಲಾರಿಯ ಹಿಂಬದಿ ಚಕ್ರಕ್ಕೆ ಸಿಲುಕಿಕೊಂಡು ಲಾರಿಯ ಚಕ್ರವು ಬೈಕ್ ಸವಾರನ ಮೇಲೆ ಹರಿದುಹೋಯಿತು ಎಂದರೆ ಸರಿ. ಸದರಿ ಲಾರಿಯ ಸಂಖ್ಯೆ ಕೆಎ-51 ಎಜಿ-0881 ಎಂದರೆ ನನಗೆ ನೆನಪಿಲ್ಲ. ಬೈಕ್ ಸಂಖ್ಯೆ ಕೆಎ-66 ಇ-6312 ಆಗಿರುತ್ತದೆ ಎಂದರೆ ಸರಿ. ಮೃತ ವ್ಯಕ್ತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ವೈದ್ಯರು ಪರಿಶೀಲಿಸಿ ಮೃತಪಟ್ಟಿರುವ ವಿಚಾರ ತಿಳಿಸಿರುತ್ತಾರೆ ಎಂದರೆ ಸರಿ. ಅಪಘಾತದ ವಿಚಾರವಾಗಿ ಚಾಸಾ-1 ರವರು ಬೀರೂರು ಪೋಲಿಸ್ ಠಾಣೆಗೆ ಹೋಗಿ ದೂರು ನೀಡಿರುತ್ತಾರೆ ಎಂದರೆ ಸರಿ. ದೂರಿಗೆ ಸಂಬಂಧಿಸಿದಂತೆ ದಿಃ 20.08.2023 ರಂದು ಘಟನಾ ಸ್ಥಳಕ್ಕೆ ಮಹಜರ್ ಕ್ರಮ ಜರುಗಿಸಲು ಬಂದಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ-3 ಮತ್ತು 4 ರವರು ಹಾಜರಿದ್ದು ನಾನು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 12.30 ರಿಂದ 1.30 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ. ಅದೇ ದಿನಾಂಕದಂದು ಅಪಘಾತಕ್ಕೊಳಗಾದ ಮತ್ತು ಅಪಘಾತಪಡಿಸಿದ ವಾಹನವನ್ನು ಅಮಾನತ್ತುಪಡಿಸುವ ಸಲುವಾಗಿ ಪೋಲಿಸರು ನನ್ನನ್ನು ಮತ್ತು ಚಾಸಾ-5, 6 ರವರನ್ನು ಪೋಲಿಸ್ ಠಾಣೆಗೆ ಕರೆಯಿಸಿರುತ್ತಾರೆ ಎಂದರೆ ಸರಿ. ಅಪಘಾತಕ್ಕೊಳಗಾದ ವಾಹನಗಳನ್ನು ನಾನು ತೋರಿಸಿದ್ದು ಅವುಗಳನ್ನು ಮಧ್ಯಾಹ್ನ 1.45 ರಿಂದ 2.30 ರವರೆಗೆ ಅಮಾನತ್ತು ಕ್ರಮ ಜರುಗಿಸಿ ಮೇಲೆ ಹೇಳಿದ ನೋಂದಣಿ ಸಂಖ್ಯೆಯ ವಾಹನಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಅದೇ ಸಮಯದಲ್ಲಿ ನಿಪಿ-14 ರಿಂದ 16 ರ ಛಾಯಾಚಿತ್ರ ತೆಗೆದಿರುತ್ತಾರೆ ಎಂದರೆ ಸರಿ.

**<u>ಪಾಟೀಸವಾಲುಃ ಶ್ರೀ ಸಿ ಜೆ .ಎಂ. ಆರೋಪಿ ಪರ ವಕೀಲರಿಂದಃ</u>**

ನಾನು ಅಭಿಶೇಕ್ ಸಾಮಿಲ್ ನಲ್ಲಿ ಸುಮಾರು 4 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಅಪಘಾತದ ಸಮಯದಲ್ಲಿ ನಾನು ಸಾಮಿಲ್ ಒಳಗಡೆ ಕೆಲಸ ಮಾಡುತ್ತಿದ್ದೆ ಎಂದರೆ ಸರಿ, ಸಾಕ್ಷಿ

ಮುಂದುವರೆದು ಹೊರಗಡೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಶಬ್ದ ಬಂದ ನಂತರವೇ ನನಗೆ ಅಪಘಾತದ ವಿಷಯ ತಿಳಿಯಿತು ಎಂದರೆ ಸರಿ. ನಾನು ನಿಂತಿದ್ದ ಸ್ಥಳಕ್ಕೂ ಅಪಘಾತ ನಡೆದ ಸ್ಥಳಕ್ಕೂ ಸುಮಾರು 400-500 ಮೀಟರ್ ಅಂತರ ಇರುತ್ತದೆ ಎಂದರೆ ಸರಿಯಲ್ಲ. ಅಪಘಾತವಾದ ವಿಚಾರ ತಿಳಿದು ನಾನು ಒಬ್ಬನೇ ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಸುಮಾರು 10-15 ಜನರು ಸೇರಿದ್ದರು ಎಂದರೆ ಸರಿ, ಅವರುಗಳು ಯಾರು ಎಂದು ನನಗೆ ಗೊತ್ತಿಲ್ಲ. ಅಪಘಾತವಾದ ಸ್ಥಳದಲ್ಲಿ ಲಾರಿ ಇರಲಿಲ್ಲ. ರಾಷ್ಟ್ರೀಯ ಹೆದ್ದಾರಿ 206 ರಲ್ಲಿ ದಿನನಿತ್ಯ ಸಾವಿರಾರು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಇದೇ ವಾಹನದಿಂದ ಅಪಘಾತವಾಯಿತು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲಾ ಎಂದರೆ ಸರಿ. ಅಭಿಶೇಕ್ ಸಾಮಿಲ್ ಮುಂಭಾಗ ರಾಷ್ಟ್ರೀಯ ಹೆದ್ದಾರಿ ಇದ್ದು ನಂತರ ಸರ್ವಿಸ್ ರಸ್ತೆಗೆ ತಿರುವು ಇರುತ್ತದೆ ಎಂದರೆ ಸರಿ. ಸದರಿ ಸರ್ವಿಸ್ ರಸ್ತೆಯ ತಿರುವಿನ ನಂತರದ 50 ಮೀಟರ್ ದೂರದಲ್ಲಿ ಅಪಘಾತವಾಗಿರುತ್ತದೆ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿ ಕೆಲಸ ನಡೆಯುತ್ತಿದ್ದಕಾರಣ ಅಲ್ಲಲ್ಲಿ ಸುಮಾರು 3-4 ರಸ್ತೆಯ ಉಬ್ಬುಗಳನ್ನು ಹಾಕಿದ್ದರು ಎಂದರೆ ಸರಿ. ವಾಹನಗಳು ವೇಗವಾಗಿ ಓಡಾಡಬಾರದೆಂಬ ಉದ್ದೇಶದಿಂದ ರಸ್ತೆಯ ಉಬ್ಬುಗಳನ್ನು ಹಾಕಿರುತ್ತಾರೆ ಎಂದರೆ ಸರಿ. ರಸ್ತೆಯ ಉಬ್ಬುಗಳಿರುವ ಕಾರಣ ಯಾವುದೇ ವಾಹನಗಳು ವೇಗವಾಗಿ ಓಡಾಡಲು ಆಗುವುದಿಲ್ಲ ಎಂದರೆ ಸರಿ.

ನಾನು ಸ್ಥಳದಲ್ಲಿ ಇಲ್ಲದೇ ಇದ್ದಕಾರಣ ಅಪಘಾತ ಯಾವ ರೀತಿ ಸಂಭವಿಸಿತು ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲಾ ಎಂದರೆ ಸರಿ. ನಿಪಿ-10 ಮತ್ತು 12 ರಲ್ಲಿ ನಾವು ಬೀರೂರು ಕಡೆ ಮುಖ ಮಾಡಿ ನಿಂತಿರುತ್ತೇವೆ ಎಂದರೆ ಸರಿ. ನಿಪಿ-10 ರ ರಸ್ತೆಯಲ್ಲಿ ಕಂಡುಬರುವ ರಕ್ತದ ಕಲೆ ಇರುವ ಜಾಗವೇ ಅಪಘಾತವಾದ ಸ್ಥಳ ಎಂದರೆ ಸರಿ. ನಿಪಿ-10 ರಲ್ಲಿ ಕಂಡುಬರುವ ಜೀಪು ಕಡೂರು ಕಡೆಯಿಂದ ಬೀರೂರು ಕಡೆಗೆ ಬರುವ ರಸ್ತೆಯಲ್ಲಿ ಬರುತ್ತಿದೆ ಎಂದರೆ ಸರಿ. ಅದೇ ರೀತಿ ಅಪಘಾತವಾದ ಸ್ಥಳವು ಬೀರೂರಿನಿಂದ ಕಡೂರು ಕಡೆಗೆ ಬರುವ ವಾಹನಗಳಿಗೆ ಬಿಟ್ಟಿರುವ ಜಾಗ ಎಂದರೆ ಸರಿ. ಅಪಘಾತವು ಬೀರೂರು ಕಡೆಯಿಂದ ಕಡೂರು ಕಡೆಗೆ ಹೋಗುವ ರಸ್ತೆಯಲ್ಲಿ ಆಗಿರುತ್ತದೆ ಎಂದರೆ ಸರಿ. ಮೃತ ವ್ಯಕ್ತಿಯು ವಿರುದ್ಧ ದಿಕ್ಕಿನಿಂದ ಬಂದು ಯಾವುದೋ ವಾಹನಕ್ಕೆ ಡಿಕ್ಕಿಪಡಿಸಿದ ಸ್ಥಳವೇ ಅಪಘಾತವಾದ ಸ್ಥಳ ಎಂದರೆ ಸರಿ. ಮಹಜರನ್ನು ಯಾರು ಬರೆದರು ಮತ್ತು ಅದಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದರೆ ಸರಿ. ಪೋಲಿಸರು ನೀಡಿರುವ ಮಾಹಿತಿ ಮೇರೆಗೆ ಅಪಘಾತಪಡಿಸಿದೆ ಎನ್ನಲಾದ ಲಾರಿಯ ವಿವರ ನನಗೆ ತಿಳಿಯಿತು ಎಂದರೆ ಸರಿ. ಅಮಾನತ್ತು ಮಹಜರನ್ನು ಯಾರು ಬರೆದರು ಮತ್ತು ಅದಕ್ಕೆ ಯಾರು ಯಾರು ಸಹಿ ಮಾಡಿದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದರೆ ಸರಿ. ಆರೋಪಿಯೇ ಅಪಘಾತಪಡಿಸಿರುತ್ತಾನೆ ಎಂಬ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆರೋಪಿಯ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಲಾರಿಯ ಯಾವ ಭಾಗಕ್ಕೆ ಬೈಕ್ ಡಿಕ್ಕಿಹೊಡೆದಿರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ

ಇಲ್ಲಾ ಎಂದರೆ ಸರಿಯಲ್ಲ.  ಪೋಲಿಸರ ಹೇಳಿಕೆ ಮೇರೆಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.